ESI.A.No. 51–19

RW–1,

ದಿನಾಂಕಃ 09–07–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– ಅರ್ಜಿದಾರರ ಪರವಾಗಿಃ ಶ್ರೀ. ಹೆಚ್ ಸಿ ಆರ್ ವಕೀಲರಿಂದ

ನಾನು ಎದುರುದಾರರ ಸಂಸ್ಥೆಯಲ್ಲಿ 17 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ . ಎದುರುದಾರರು ಅರ್ಜಿದಾರರಿಗೆ ಸಿ ಆರ್ –3 ರಂತೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ . ಸಿ ಆರ್ –3 ನ್ನು Assumed Wages ಮತ್ತು Number of Employees ಆಧಾರದ ಮೇರೆಗೆ ವಂತಿಗೆಯನ್ನು ಲೆಕ್ಕ ಹಾಕಿ ನೀಡಲಾಗಿರುತ್ತದೆ. 2016 ರಲ್ಲಿ ಅರ್ಜಿದಾರರ ಸಂಸ್ಥೆ ಗೆ ಭೇಟಿಯನ್ನು ನೀಡಿರುವುದಿಲ್ಲ . ಅರ್ಜಿದಾರರ ಸಂಸ್ಥೆಯಲ್ಲಿರುವ ಕೆಲಸಗಾರರ ಸಂಖ್ಯೆಯನ್ನು ಅರ್ಜಿದಾರರು ಇ ಎಸ್ ಐ ಕೋಡನ್ನು ಪಡೆಯುವ ಕಾಲಕ್ಕೆ ನೀಡಿದ ಮಾಹಿತಿಯಲ್ಲಿ ಇದ್ದು ಅದನ್ನು ನೋಟೀಸ್ ನೀಡುವ ಕಾಲಕ್ಕೆ ಗಣನೆಗೆ ತೆಗೆದುಕೊಳ್ಳಲಾಗಿರುತ್ತದೆ. ಸಿ ಆರ್ –3 ನೋಟೀಸನ್ನು ಊಹೆ ಮಾಡಿ ಲೆಕ್ಕ ಹಾಕಿದ್ದರಿಂದ ಅರ್ಜಿದಾರರು ಸದರಿ ಮೊತ್ತವನ್ನು ಎದುರುದಾರರಿಗೆ ನೀಡಲು ಭಾದ್ಯಸ್ಥರಾಗಿರವುದಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರರ ಸಂಸ್ಥೆಯಲ್ಲಿ 17 ಜನ ಕೆಲಸಗಾರರು ಇಲ್ಲದಿದ್ದರೂ ಸಹ ತಪ್ಪು ಲೆಕ್ಕ ಮಾಡಿ ನ ಸಿ ಆರ್ –3 ನೋಟೀಸನ್ನು ನೀಡಿದ್ದೀರಿ ಎಂದರೆ ಸರಿಯಲ್ಲ .

ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.